


## ಪ್ರತಿ ಮಗುವಿನಂತೆ ಪೋಷಕರೂ ವಿಭಿನ್ನ

ಜ್ವರ, ನೆಗಡಿ, ಕೆಮ್ಮುಗಳಂತಹ ದೈಹಿಕ ಆರೋಗ್ಯ ಸಂಬಂಧಿ ಸಮಸ್ಯೆಯನ್ನು ಹೊರತುಪಡಿಸಿ ನವಜಾತ ಶಿಶುವಿನಿಂದ 17 ವರ್ಷದ ಮಕ್ಕಳ ಮಾನಸಿಕ ಮತ್ತು ಶೈಕ್ಷಣಿಕ ಬೆಳವಣಿಗೆ ಬಗ್ಗೆ ನಿಗಾವಹಿಸುವ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ. ಮೇಘನಾ ಕಶ್ಯಪ್ ಮಕ್ಕಳ ಸಮಸ್ಯೆಯನ್ನು ಪರೀಕ್ಷಿಸುವ ಬಗೆ ಮತ್ತು ನೀಡುವ ಪರಿಹಾರವನ್ನು ಇಲ್ಲಿ ವಿವರಿಸಿದ್ದಾರೆ. ಮಗುವಿನ ಬೆಳವಣಿಗೆಯಲ್ಲಿ ಯಾವುದೇ ರೂಪದ ತೊಂದರೆ ಇದ್ದರೂ ಪರೀಕ್ಷೆಗೆ ಒಳಪಡಿಸುವುದು ಅಗತ್ಯ. ಮಕ್ಕಳು ಮಾತಿನಲ್ಲಿ ನಿಧಾನವಿದ್ದರೆ, ಓಡಾಡುವುದರಲ್ಲಿ ತೊಂದರೆ ಇದ್ದರೆ, ಬುದ್ಧಿಶಕ್ತಿ, ನಡವಳಿಕೆ ಸಮಸ್ಯೆ ಇದ್ದಲ್ಲಿ ಅದನ್ನು ಗುರುತಿಸುವ ಪ್ರಕ್ರಿಯೆಯನ್ನು ಅಸೆಸ್‌ಮೆಂಟ್ ಮೂಲಕ ಮಾಡಬೇಕು. ಸಮಸ್ಯೆ ಏನಿದೆ ಎನ್ನುವುದರ ಮೇಲೆ ಥೆರಪಿ ಆರಂಭಿಸಲಾಗುತ್ತದೆ. ವರ್ತನೆಯಲ್ಲಿ ಸಮಸ್ಯೆಯಿದ್ದರೆ ಅದರಲ್ಲಿ ಏನು ಸುಧಾರಣೆ ಅಗತ್ಯವಿದೆಯೋ ಆ ಸ್ವರೂಪದಲ್ಲಿ ಥೆರಪಿ ಇರುತ್ತದೆ ಎನ್ನುತ್ತಾರೆ ಅವರು.



ಸಾಮಾನ್ಯವಾಗಿ 6 ವರ್ಷ ತುಂಬುತ್ತಿದ್ದಂತೆ ಮಕ್ಕಳು ಒಂದನೇ ತರಗತಿಗೆ ಹೋಗಬೇಕು. ಅದಕ್ಕೆ ಪೋಷಕರು–ಮಗು ಸಿದ್ಧ ಆಗಿದ್ದಾರೆಯೇ? ಶಾಲೆ ಮಕ್ಕಳನ್ನು ಸೇರಿಸಿಕೊಳ್ಳಲು ಸಿದ್ಧವಿದೆಯೇ ಎನ್ನುವುದನ್ನು ಗುರುತಿಸುವುದು ವಿಶೇಷ ಮಕ್ಕಳ ಸಂದರ್ಭದಲ್ಲಿ ಮುಖ್ಯ ಆಗುತ್ತದೆ. ಸರ್ಕಾರ **RPWD (Rights of persons with disabilities act) 2016** ನ್ಯೂನತೆ ಕಾಯ್ದೆ ಪ್ರಕಾರ ಎಲ್ಲ ಮಕ್ಕಳಿಗೂ ಸಮಾನವಾದ ಅವಕಾಶ ಸಿಗಬೇಕು ಎನ್ನುತ್ತದೆ. 21 ನ್ಯೂನತೆಗಳನ್ನು ಭಾರತದಲ್ಲಿ ವಿಕಲಾಂಗತೆ (**disabilities**) ಎಂದು ಗುರುತಿಸಲಾಗುತ್ತದೆ. ವೈಕಲ್ಯ ಇರುವ ಮಕ್ಕಳಿಗೆ ಸಮಾನ ಅವಕಾಶ ಕೊಟ್ಟು ಗೌರವದಿಂದ ನಡೆಸಿಕೊಳ್ಳಬೇಕು ಎನ್ನುವುದು ನಮ್ಮ ಕಾಯ್ದೆಯ ಕಾಳಜಿ.



ವಿಶೇಷ ಮಕ್ಕಳಿಗೆ ಶೇ. 4ರಷ್ಟು ಮೀಸಲು ನಿಗದಿ ಮಾಡಲಾಗಿದೆ. ಯಾವ ಶಾಲೆಯಲ್ಲಾದರೂ ಓದಬಹುದಾದ ಅವಕಾಶವೂ ಅವರಿಗೆ ಇದೆ. ಮಕ್ಕಳ ನ್ಯೂನತೆಯ ಸ್ಥಿತಿಯ ಮೇಲೆ ಗುರುತಿನ ಪತ್ರವನ್ನು ಸರ್ಕಾರ ನೀಡುತ್ತದೆ. ಅದಕ್ಕೆ ಯುಡಿಐಡಿ (**Unique Disability ID**) ಎನ್ನುತ್ತಾರೆ. ಅದನ್ನು ಪಡೆದ ಮಕ್ಕಳಿಗೆ ಸರ್ಕಾರಿ ಸೌಲಭ್ಯ ಪಡೆಯುವ ಹಕ್ಕು ಇರುತ್ತದೆ. ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಕಾಳಜಿ ಬೇಕಾಗುತ್ತದೆ. ಅದರಲ್ಲಿ ಆಟಿಸಂ, ಸೆರಬ್ರಲ್ ಪಾಲ್ಸಿ, ಹಿಯರಿಂಗ್ ಇಂಪೈರ್‌ಮೆಂಟ್ (ಕಿವುಡು), ಕಲಿಕಾ ನ್ಯೂನತೆ ಸೇರಿದಂತೆ ಹಲವು ಪ್ರಕಾರದ ಸಮಸ್ಯೆಗಳು ಇವೆ. ಅವನ್ನು ಗುರುತಿಸಲು ಬೇರೆ ಬೇರೆ ಪರೀಕ್ಷೆ ಇರುತ್ತವೆ. ಆ ಪರೀಕ್ಷೆಯ ವರದಿಯ ಮೇಲೆ ಯುಡಿಐಡಿ ಕಾರ್ಡ್ ತೆಗೆದುಕೊಳ್ಳುವ ಹಕ್ಕು ಅವರಿಗೆ ಇರುತ್ತದೆ.

ಪ್ರತಿ ಸಮಸ್ಯೆಗೂ ಪರೀಕ್ಷಾ ಸಾಧನ ಮತ್ತು ಅದರದ್ದೇ ಆದ ಮಾನದಂಡಗಳು ಇವೆ. 18 ತಿಂಗಳಿಗೆ ಆಟಿಸಂ ಗುರುತಿಸಬಹುದು. ಆದರೆ ಕಲಿಕಾ ನ್ಯೂನತೆ ಪತ್ತೆ ಹಚ್ಚಲು ಕನಿಷ್ಠ 8 ವರ್ಷ ಆಗಬೇಕು. ಅದಕ್ಕಿಂತ ಮುಂಚೆ ಕಲಿಕಾ ನ್ಯೂನತೆ ಎಂದು ಹೇಳುವಂತಿಲ್ಲ. ಪ್ರತಿ ಮಗೂ ಹೇಗೆ ವಿಭಿನ್ನವೋ ಪೋಷಕರು ಕೂಡ ವಿಭಿನ್ನ. ಸಮಸ್ಯೆಗೆ ಪೂರಕವಾಗಿ ಪೋಷಕರು ಮಕ್ಕಳ ಪೋಷಣೆಯನ್ನು ಹೇಗೆ ಮಾಡಬೇಕು ಎನ್ನುವುದೂ ಬೇಕಾಗುತ್ತದೆ. ಪೋಷಕರಲ್ಲಿಯೂ ದೈಹಿಕ ಮತ್ತು ಭಾವನಾತ್ಮಕ ಸಿದ್ಧತೆ ಹೇಗಿರಬೇಕು. ಭಾಷೆ ಮತ್ತು ಕೌಶಲ್ಯದ ಸಿದ್ಧತೆ ಬೇಕಾಗುತ್ತದೆ. ಅದಕ್ಕೆ ಪೂರಕವಾಗುವಂತಹ ಅಸೆಸ್‌ಮೆಂಟ್ ಮಾಡಬೇಕಾಗುತ್ತದೆ. ಮಗು 1.5 ವರ್ಷದಲ್ಲಿ ನಡೆಯಬೇಕು. ನಡೆಯದಿದ್ದರೆ ತೊಂದರೆ ಇರಬಹುದೇ ಎಂದು ಯೋಚಿಸಬೇಕು. ಅದಕ್ಕೆ ಬೇಕಾಗುವ ಸಿದ್ಧತೆಯನ್ನು ಶಾರೀರಿಕ ಸಿದ್ಧತೆ ಎನ್ನುತ್ತಾರೆ. ಮಗು 1ನೇ ತರಗತಿ ಹೋಗುವಾಗ ಬರೆಯಲು ಬರಬೇಕು. ಮಗುವಿಗೆ ಪೆನ್ ಹಿಡಿಯಲು ಬರಬೇಕು. ಮಗು ತನಗೆ ಹಸಿವಾದರೆ ತಿಳಿಸಬೇಕು. ಶೌಚಾಲಯಕ್ಕೆ ಹೋಗಬೇಕೆಂದರೆ ಹೇಳುವಂತೆ ಇರಬೇಕು. ಇದೆಲ್ಲ ಮಗು ಶಾಲೆಗೆ ಕಳಿಸುವ ಮುನ್ನ

## ಸ್ವಾವಲಂಬನೆ ನಮ್ಮ ಗುರಿ

ಬೌದ್ಧಿಕ ನ್ಯೂನತೆ, ಆಟಿಸಂ (ಸ್ವಲೀನ) ಮಕ್ಕಳ ಮನೋಸ್ಥಿತಿಯನ್ನು ಅವಲಂಬಿಸಿ ಕಲಿಸುವುದು ನಮ್ಮ ಕಲೆ. ಮಗುವಿನ ಮೂಡ್ ಸರಿ ಇಲ್ಲ ಎಂದು ಗೊತ್ತಾದರೆ ತಕ್ಷಣ ಅಕಾಡಮಿಕ್ ಪಠ್ಯವನ್ನು ಬಿಟ್ಟು. ಕಲರಿಂಗ್, ಪಝಲ್ ಮೂಲಕ ತರಬೇತಿ ನೀಡುತ್ತೇವೆ. ಅಂತಹ ಸಂದರ್ಭದಲ್ಲಿ ಒನ್ ಟು ಒನ್ ಪಾಠವೇ ಸೂಕ್ತ. ಬೇರೆ ಬೇರೆ ಮಕ್ಕಳಿಗೆ ಬೇರೆ ಬೇರೆ ನ್ಯೂನತೆಗಳು ಇರುತ್ತವೆ. ಅವರಿಗೆ ಬೇಕಾಗುವ ಅರಿವನ್ನು ಥೆರಪಿಸ್ಟ್‌ಗಳ ಜೊತೆ ಸೇರಿ ಕಲಿಸುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಒಟ್ಟಾರೆ ಮಕ್ಕಳನ್ನು ಎಲ್ಲ ರೀತಿಯಿಂದಲೂ ಸ್ವಾವಲಂಬಿಗಳನ್ನಾಗಿ ಮಾಡುವುದು ನಮ್ಮ ಗುರಿಯಾಗಿರುತ್ತದೆ.

**–ಶಿವಲೀಲಾ ಚೂಡಿ,**
‘ಬುದ್ಧಿ ದ ಲರ್ನಿಂಗ್ ಲ್ಯಾಬ್’
ಸಂಸ್ಥಾಪಕಿ



